ಎಂದು ಅಳಲಾರಂಭಿಸಿತು ಅಜ್ಜಿ. ಅಯ್ಯೋ ಕರ್ಮವೇ! ನಾನೆಲ್ಲೋ ಈಕೆ ಪಾಲಿನ ಯಮ ಎನ್ನುವಂತೆ ಮಾತಾಡುತ್ತಾಳಲ್ಲ. ಸಿಗ್ನಲ್‌ನಲ್ಲಿ ಹಿಂದೆಮುಂದೆ ನೋಡದೆ ನುಗ್ಗಿ ಅವಾಂತರ ಮಾಡಿದ್ದು ಇವಳೇ. ಈಗ ಇವಳನ್ನು ಕೊಲ್ಲುವುದಕ್ಕೇ ನಾನು ಬಂದಿದ್ದು ಎನ್ನುವಂತೆ ಮಾತಾಡಬಹುದೆ! 'ಇಕಾ ಇಲ್ನೋಡು... ಕೈಕಾಲು ಎಲ್ಲಾ ಕಿತ್ತೋಗಿ ಎಂಗ್ ರತ್ತ ಬತ್ತಾದೆ. ಮೊಕವೆಲ್ಲಾ ಗೀಟಾಗೋಗದೆ. ಇನ್ನೊಸಿ ಆಗಿದ್ರೆ ಕಣ್ಣೇ ಓಗ್ಬುಡದು' ಎಂದೆಲ್ಲಾ ದೂರತೊಡಗಿದಳು. ಈಕೆಯ ಗೋಳಾಟ ಹೆಚ್ಚಾದಂತೆ ಜೊತೆಗಿದ್ದ ಮುದುಕಪ್ಪ ಚೌಕಾಸಿ ಆರಂಭಿಸಿದ. 'ಏನಾರ ವಸಿ ಕೊಡಿ ಈವಮ್ಮಂಗೆ. ಡಾಕುಟ್ರತ್ರ ಓಯ್ತುಳೆ. ಅಟ್ಟುಇಟ್ಟು ಅಂತಿಲ್ಲ. ನೀವೆ ತಿಳ್ಕಂಡ್ಕೊಡಿ, ಎಣ್ಣೈಕ್ಳು ಕಾರು ಓಡ್ಸುದ್ರೆ ಇನ್ನೇನಾದಾತು' ಎನ್ನುತ್ತಾ ಕಾರಿನ ಕಿಟಕಿಗೆ ಆತುಕೊಂಡ. ಬೆಳಗ್ಗೆಯೆ ಇದೆಲ್ಲಿಯ ಗ್ರಹಚಾರ ಎನ್ನುತ್ತಾ ಪರ್ಸಿನಲ್ಲಿದ್ದ ಒಂದೇಒಂದು ಐನೂರರ ನೋಟನ್ನು ಚಾಚಿದೆ. 'ಐನೂರಾಯ್ಕಿಲ್ಲ! ಏಡ್ ಸಾವ್ರನಾರ ಬೇಕು. ಈ ಪಾಟಿ ಏಟಾಗದೆ...' ಎಂದೆಲ್ಲಾ ಮುದುಕಿ ಕ್ಯಾತೆ ತೆಗೆಯುತ್ತಿದ್ದಂತೆ ನನ್ನದೂ ಸಹನೆ ಮೀರಿಹೋಯಿತು. ಚಿಕ್ಕದೊಂದು ತರಚು ಗಾಯ ಬಿಟ್ಟರೆ ಮೈಮೇಲೆ ಇನ್ನೊಂದು ಗೀರಿಲ್ಲ. ಅಂಥದ್ದರಲ್ಲಿ... 'ಈ ಅಜ್ಜಿ ಬಂದು ಬಿದ್ದಿದ್ದಕ್ಕೆ ನನ್ನ ಕಾರಿನ ಮುಂಗ್ಗಡೆ ಕಿತ್ತೋಯ್ತು. ರಿಪೇರಿಗೆ ಹತ್ತು ಸಾವ್ರ ಆಗತ್ತೆ. ಇಡಿ ಮೊದ್ಲು ದುಡ್ಡು' ಎಂದು ನನ್ನ ದನಿಯೇರಿಸಿದೆ. 'ಐಯ್! ಬಮ್ಮಿ ವೋಗನ' ಎನ್ನುತ್ತಾ ನನ್ನ ಕೈಯಲ್ಲಿದ್ದ ಹಣವನ್ನು ಕಿತ್ತುಕೊಂಡು, ಮುದುಕಿಯನ್ನೂ ಎಳೆದುಕೊಂಡು ಕ್ಷಣಾರ್ಧದಲ್ಲಿ ಮಾಯವಾದ ಮುದುಕ.

ಇಡೀ ಘಟನೆಯಿಂದ ಸುಧಾರಿಸಿಕೊಳ್ಳಲು ಕೆಲವು ನಿಮಿಷಗಳು ಬೇಕಾದವು. ನನ್ನದೇನೂ ತಪ್ಪಿಲ್ಲದಿದ್ದರೂ ವಯಸ್ಸಾದವರೆಂಬ ಕರುಣೆ ತೋರಿದ್ದೇ ತಪ್ಪಾಯಿತೆ? ಇಷ್ಟಕ್ಕೂ ಮುದುಕಿ ತ್ರಿನೇತ್ರ ಸರ್ಕಲ್ಲಿಗೆ ಬರುವ ವಿಷಯ ಮುದುಕನಿಗೆ ಹೇಗೆ ತಿಳಿಯಿತು? ಮೊದಲೇ ಕಾಯುತ್ತಿದ್ದನೇ? ಆಕಸ್ಮಿಕವಾಗಿ ಬಂದವನೇ? ಹಣಕ್ಕಾಗಿ ಕಾರಿಗೆ ಅಡ್ಡಬರುವಷ್ಟು ಅಗ್ಗವೇ ಜೀವ? ಅಥವಾ ನಿಜಕ್ಕೂ ಎಲ್ಲವೂ ಆಕಸ್ಮಿಕವಾಗಿಯೇ ಘಟಿಸಿದ್ದೆ? ಹಾಗಾದರೆ ಯಾರನ್ನು ಯಾವುದನ್ನು ನಂಬುವುದು? ಎಂದೆಲ್ಲ ಗೊಣಗುತ್ತಾ ಆಫೀಸು ತಲುಪುವಷ್ಟರಲ್ಲಿ ದಿನಕ್ಕಿಂತ ಬಹಳ ತಡವಾಗಿತ್ತು. ಪಕ್ಕದ ಸೀಟಿನ ಆರತಿ ನನ್ನ ಮುಖ ನೋಡುತ್ತಿದ್ದಂತೆಯೇ, 'ಯಾಕ್ರಿ ಒಂಥರಾ ಇದ್ದೀರಿ' ಎನ್ನುತ್ತಾ ಮಾತಿಗೆಳೆದರು. ನಡೆದ ವಿಷಯ ತಿಳಿಸಿದೆ. 'ಅಯ್ಯೋ! ಇನ್ನೂ ಒಂದಿಬ್ರು ಇಂಥದ್ದೇ ಘಟನೆ ಬಗ್ಗೆ ಹೇಳಿದ್ರು. ಸಿಗ್ನಲ್‌ಗಳಲ್ಲಿ ಹೊಂಚು ಹಾಕ್ತಾರೇನೊ' ಎಂದು ಆರತಿ ಹೇಳಿದಾಗ ಇನ್ನಷ್ಟು ದಿಗ್ಭ್ರಮೆಯಾಯಿತು. ಸಾಯ್ಲಿ ಅವರೆಲ್ಲ ಎಂದು ಶಾಪ ಹಾಕುತ್ತಾ ಉಮಾಳೊಂದಿಗೆ ಮಾತಾಡಲು ಅಕೌಂಟ್ಸ್ ವಿಭಾಗಕ್ಕೆ ನಡೆದೆ. ಉಮಾ ಯಾರೊಂದಿಗೋ ಫೋನಿನಲ್ಲಿ ಜೋರಾಗಿ ಮಾತಾಡುತ್ತಿದ್ದಳು. ನನ್ನನ್ನು ಕಾಣುತ್ತಿದ್ದಂತೆ ಫೋನ್ ಕರೆ ಕತ್ತರಿಸಿ ಬಂದವಳೇ, 'ನೋಡಿ ಮೇಡಂ. ಜನ ಹೇಗಿರ್ತಾರೆ ಅಂತ! ನಮ್ಮಜ್ಜಿಗೆ ಯಾರೋ ಕಾರಲ್ಲಿ ಗುದ್ದಿ ಮನೆ ಹತ್ರ ತಂದು ಬಿಟ್ಟು ಹೋಗಿದ್ದಾರೆ. ಸುಮಾರು ಪೆಟ್ಟಾಗಿದೆಯಂತೆ. ಆಸ್ಪತ್ರೆಗೂ ಕರ್ಕೊಂಡು ಹೋಗಿಲ್ಲ' ಎಂದಳು ಕೋಪದಿಂದ. 'ಎಲ್ಲಿದೆ ನಿಮ್ಮನೆ?' ಕೇಳಿದೆ. 'ತ್ರಿನೇತ್ರ ಸರ್ಕಲ್ ಹತ್ರ' ಉತ್ತರಿಸಿದಳು ಆಕೆ.

## ಅಲಕಾ ಕಟ್ಟೆಮನೆ

ಬೆಂಗಳೂರಿನ ಸುದ್ದಿಮನೆಯೊಂದರಲ್ಲಿ ಪತ್ರಕರ್ತೆಯಾಗಿ ಕೆಲಕಾಲ ಕೆಲಸ. ನಂತರದ ಕೆಲವು ವರ್ಷಗಳು ಅಮೆರಿಕೆಯಲ್ಲಿ ವಾಸ. ಪ್ರಸ್ತುತ ಮೈಸೂರಿನಲ್ಲಿ ನೆಲೆ. 'ಶಾಲ್ಮಲೆಯ ಹೊನಲಲ್ಲಿ' ಎಂಬ ಕಥಾಸಂಕಲನ ಪ್ರಕಟವಾಗಿದೆ.